ದಿನಾಂಕ: 21.11.2020 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

<u>ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು</u>

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ **(ಅಧ್ಯಕ್ಷರು)**
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
3. ಶ್ರೀಮತಿ. ರಶ್ಮಿ, ಸ.ಕಾ.ನಿ.ಅ, ಘ.ತ್ಯಾ.ನಿ, ಮಹಾಲಕ್ಷ್ಮೀಪುರ ವಿಭಾಗ.
4. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
5. ಶ್ರೀಮತಿ ಪ್ರೇಮ ಮಹಿಳಾ ಸದಸ್ಯರು.
6. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
7. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
8. ಶ್ರೀ ರಾಜೇಶ್ ಸದಸ್ಯರು.
9. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
10. ಶ್ರೀ ಡಾ|| ನಾಗೇಂದ್ರ ಸದಸ್ಯರು.
11. ಶ್ರೀ ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
14. ಶ್ರೀ ದಿನೇಶ್ ಕುಮಾರ್ ಜಿ.ಕೆ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
15. ಶ್ರೀ ನಿಂಗರಾಜ ಕಂದಾಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
16. ಮಹಾಲಕ್ಷ್ಮೀ ಲೇಔಟ್ ಪೋಲೀಸ್ ಠಾಣೆ ಅಧಿಕಾರಿ ರವರು

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಓದಿ ತಿಳಿಸಿದರು.
2. ಸಾರ್ವಜನಿಕರು ಮಾರ್ಕೆಟ್ ಹತ್ತಿರ ಕಸ ಹಾಕುತ್ತಿರುತ್ತಾರೆ ಎಂದು ಹೇಳಿದರು ಮಾನ್ಯ ಅಧ್ಯಕ್ಷರು ರವರು ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು.
3. ಮಾನ್ಯ ಅಧ್ಯಕ್ಷರು ಸ್ವಯಂಪ್ರಭಾ ರವರು ಕೋವಿದ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಕೇಳಿದರು, ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿದ್-19 ಪಾಸಿಟೀವ್ ಪ್ರಕರಣಗಳು ಕಡಿಮೆಯಾಗಿದೆ ಎಂದರು. ಮಾನ್ಯ ಕಾರ್ಯದರ್ಶಿಗಳು, ಕೋವಿದ್-19 ಪಾಸಿಟೀವ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕಾಯ್ದೆ 2005ರ ಅಡಿಯಲ್ಲಿ ಅರ್ಜಿದಾರರು ಮಾಹಿತಿ ಕೋರಿರುತ್ತಾರೆ ಅಗತ್ಯ ದಾಖಲೆಗಳನ್ನು ನೀಡುವಂತೆ ತಿಳಿಸಿರುತ್ತಾರೆ.
4. ಮಾನ್ಯ ಅಧ್ಯಕ್ಷರು ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೇಳಿದರು ಇದಕ್ಕೆ ಸಂಬಂದಪಟ್ಟ ವಾರ್ಡ್ ಅಭಿಯಂತರರು ಅಭಿವೃಧ್ಧಿ ಕಾಮಗಾರಿಗಳ ಕಡತಗಳ ಬಗ್ಗೆ ಸಭೆಗೆ ವಿವರಿಸಿದರು.

Scanned with CamScanner

5. ಪ್ರಸಾದ್ ಲ್ಯಾಬ್ ಹತ್ತಿರ ಇರುವ ರಸ್ತೆ ಅಗೆತದ ಬಗ್ಗೆ ಸಹಾಯಕ ಅಭಿಯಂತರರು (ಬಿಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಅತೀ ಶೀಘ್ರದಲ್ಲಿ ಮುಚ್ಚುವಂತೆ ಸೂಚಿಸಲಾಯಿತು.
6. ಆರೋಗ್ಯ ವೈಧ್ಯಾಧಿಕಾರಿಗಳು ಸಭೆಗೆ ಆಗಮಿಸಿದರು ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಆರೋಗ್ಯ ವೈಧ್ಯಾಧಿಕಾರಿಗಳನ್ನು ಕೋವಿಡ್–19 ಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವಂತೆ ತಿಳಿಸಿದರು. ವೈಧ್ಯಾಧಿಕಾರಿಗಳು ಮಾಹಿತಿಯನ್ನು ಸಭೆಯಲ್ಲಿ ಓದಿ ತಿಳಿಸಿದರು. ವಾರ್ಡ್ ಅಭಿಯಂತರರು ಕೋವಿಡ್–19 ಪಾಸಿಟೀವ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕಾಯ್ದೆ 2005ರ ಅಡಿಯಲ್ಲಿ ಮಾಹಿತಿ ಕೋರಿರುತ್ತಾರೆ ಅಗತ್ಯ ದಾಖಲೆಗಳನ್ನು ಮೇಲ್ ಮುಖಾಂತರ ಕಳುಹಿಸಲು ಸೂಚಿಸಿದರು.
7. ಆರೋಗ್ಯ ವೈಧ್ಯಾಧಿಕಾರಿಗಳು ಎಸ್ಟೀಮ್ ಕ್ಲಾಸಿಕ್ ಅಪಾರ್ಟ್‌ಮೆಂಟ್, ಬೆಲ್ ಅಪಾರ್ಟ್‌ಮೆಂಟ್ ರಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುತ್ತದೆ ಆದರೆ ಅಪಾರ್ಟ್‌ಮೆಂಟ್ ನಿವಾಸಿಗಳು, ಗೌವತಮನಗರದ ನಿವಾಸಿಗಳು ಸ್ವಾಬ್ ಪರೀಕ್ಷೆಮಾಡಿಸಿಕೊಳ್ಳಲು ನಿರಾಕರಿಸುತ್ತಿರುತ್ತಾರೆ ಎಂದು ತಿಳಿಸಿದರು ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಮೇಲಾಧಿಕಾರಿಗಳ ಜೊತೆ ಚರ್ಚಿಸಿ ಸಮಸ್ಯೆ ಬಗೆ ಹರಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.
8. ಮಾನ್ಯ ಅಧ್ಯಕ್ಷರು ಆರೋಗ್ಯ ವೈಧ್ಯಾಧಿಕಾರಿಗಳಿಗೆ ಸ್ವಾಬ್ ಟೆಸ್ಟಿಂಗ್ ರಿಪೋರ್ಟ್ ಕೇಳಿದರು ಹಾಗೂ ವಾರ್ಡ್ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸ್ವಾಬ್ ಟೆಸ್ಟಿಂಗ್ ಮಾಡುವಂತೆ ಸೂಚಿಸಿದರು ಇದಕ್ಕೆ ಆರೋಗ್ಯ ವೈಧ್ಯಾಧಿಕಾರಿ ರವರು ದಿನಾಂಕ:17.11.2020 ಮತ್ತು 18.11.2020 ರಂದು ವಿವೇಕಾನಂದ ಕಾಲೇಜು ವಿದ್ಯಾರ್ಥಿಗಳಿಗೆ ಟೆಸ್ಟ್ ಮಾಡಲಾಯಿತು ಎಂದರು.
9. ಶ್ರೀ ರಾಜೇಶ್ ಸದಸ್ಯರು ಕೋವಿಡ್–19 ಗೆ ಸಂಬಂಧಿಸಿದಂತೆ ಹೊಸದಾಗಿ ಯಾವುದಾದರು ಜಾಗೃತಿ ಅಥವಾ ಕ್ರಮಗಳನ್ನು ತೆಗೆದುಕೊಳ್ಳಬೇಕ ಎಂದು ಕೇಳಿದರು ಇದಕ್ಕೆ ಆರೋಗ್ಯ ವೈಧ್ಯಾಧಿಕಾರಿಗಳು ಹೊಸದಾಗಿ ಯಾವುದೇ ಜಾಗೃತಿ ಅಥವಾ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಮಾಹಿತಿಯು ನಮ್ಮ ಆರೋಗ್ಯ ಕೇಂದ್ರಕ್ಕೆ ಬಂದಿರುವುದಿಲ್ಲ ಎಂದು ತಿಳಿಸಿದರು.
10. ಶ್ರೀ ಡಾ|| ನಾಗೇಂದ್ರ ಸದಸ್ಯರು ರವರು ಸಭೆಗೆ ಆಗಮಿಸಿದರು ಸೋಮೇಶ್ವರನಗರದಲ್ಲಿನ ಸ್ಯಾನಿಟರಿ ಲೈನ್ ಸಮಸ್ಯೆ ಬಗ್ಗೆ ತೆಗೆದು ಕೊಂಡ ಕ್ರಮದ ಬಗ್ಗೆ ಕೇಳಿದರು ಸಂಬಂಧಪಟ್ಟ ಬಿಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಮುಂದಿನ ಸಭೆಯಲ್ಲಿ ನೀಡುತ್ತೇನೆ ಎಂದು ತಿಳಿಸಿದರು.
11. ಶ್ರೀ ಡಾ|| ನಾಗೇಂದ್ರ ಸದಸ್ಯರು ರವರು ಕುವೆಂಪು ಸ್ಟಾಚ್ಯು, ಸುಬಾಸ್ ಚಂದ್ರ ಬೋಸ್ ಸ್ಟಾಚ್ಯೂ ಮತ್ತು ವಾರ್ಡ್‌ನ ಹಲವು ಪ್ರದೇಶಗಳಲ್ಲಿ ಘನತ್ಯಾಜ್ಯವನ್ನು ಹಾಕುತ್ತಿರುತ್ತಾರೆ ಆದ್ದರಿಂದ ಸದರಿ ಸ್ಟಾಚ್ಯುಗಳನ್ನು ಸ್ಥಳಾಂತರಿಸಿ ಅಥವಾ ಕಸ ಹಾಕುವುದನ್ನು ತಡೆಗಟ್ಟುವಂತೆ ಹಿಂದಿನ ಸಭೆಯಲ್ಲಿ ಕೋರಲಾಗಿರುತ್ತದೆ ಇದಕ್ಕೆ ತೆಗೆದುಕೊಂಡ ಕ್ರಮಗಳನ್ನು ತಿಳಿಸಿ ಎಂದು ಕೋರಿದರು. ಮಾನ್ಯ ಕಾರ್ಯದರ್ಶಿಗಳು ವಾರ್ಡ್ ಕಮಿಟಿ ಸದಸ್ಯರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸಮಯ ನಿಗದಿ ಪಡಿಸಿ ಸ್ಟಾಚ್ಯು ಇರುವ ಸ್ಥಳದಲ್ಲಿ ಕಾಯ್ದು ಕಸ ಹಾಕುವವರಿಗೆ ದಂಡ ವಿಧಿಸೋಣ ಮತ್ತು ಜಾಗೃತಿ ಮೂಡಿಸೋಣ ಎಂದು ತಿಳಿಸಿದರು ಹಾಗೂ ಶ್ರೀ ರಾಜೇಶ್ ಸದಸ್ಯರು ರವರು ಪ್ರಸತಾಪಿತ ಸ್ಥಳದಲ್ಲಿ ಗಾರ್ಡನ್ ರೀತಿ ಅಭಿವೃದ್ಧಿ ಪಡಿಸಿದರೆ ಸಮಸ್ಯೆ ಪರಿಹಾರವಾಗುತ್ತದೆ. ಈ ಹಿಂದೆ ಬೇರೊಂದು ಸ್ಥಳದಲ್ಲಿ ಇದೇ ಮಾದರಿಯಲ್ಲಿ ಮಾಡಲಾಗಿತ್ತು ಸಮಸ್ಯೆ ಪರಿಹಾರ ಆಗಿತ್ತು ಎಂದು ತಿಳಿಸಿದರು.
12. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು ರವರು ಶಂಕರನಗರ ಪಾರ್ಕ್ ಹತ್ತಿರು ಪೋಲಿ ಪುಂಡರ ಹಾವಳಿ ಹೆಚ್ಚಾಗಿರುತ್ತದೆ ಸಾರ್ವಜನಿಕರಿಗೆ ಸಂಚರಿಸಲು ತುಂಬ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಆದರೆ ಪ್ರಸ್ತಾಪಿತ ವ್ಯಾಪ್ತಿಗೆ ಸಂಬಂಧಿಸಿದ ಪೋಲೀಸ್ ಠಾಣೆ ಅಧಿಕಾರಿಗಳು ಹಾಜರಿರಲಿಲ್ಲ ಆದ್ದರಿಂದ ಮಾನ್ಯ ಕಾರ್ಯದರ್ಶಿಗಳು ದೂರವಾಣಿ ಮೂಲಕ ಸಂಬಂಧಪಟ್ಟ ಪೋಲೀಸ್ ಠಾಣೆಗೆ ಪ್ರಸ್ತಾಪಿತ ವಿಷಯದ ಬಗ್ಗೆ ತಿಳಿಸಿದರು.

Scanned with CamScanner

13. ಶ್ರೀ ಕೇಶವರೆಡ್ಡಿ ಸಾರ್ವಜನಿಕರು ಬೀದಿ ಬದಿ ವ್ಯಾಪಾರಿಗಳು ಶಂಕರನಗರದ ಮುಖ್ಯರಸ್ತೆಯಲ್ಲಿ ಮುಂಜಾನೆ ಗಲಾಟೆ ಮಾಡುತ್ತಿರುತ್ತಾರೆ ಸಿಗರೇಟ್ ತಂಬಾಕು ವ್ಯಸನಗಳನ್ನು ಬಳಸುತ್ತಿರುತ್ತಾರೆ ಇದರಿಂದ ಶಂಕರನಗರದ ಮುಖ್ಯರಸ್ತೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ಸಭೆಗೆ ಶಂಕರನಗರ ನಿವಾಸಿಗಳ ವೇದಿಕೆ (ರಿ) ಯಿಂದ ಪತ್ರ ಸಲ್ಲಿಸಿರುತ್ತಾರೆ. ಸದಕ್ಕೆ ವಾರ್ಡ್ ಅಭಿಯಂತರರು ಈ ಬಗ್ಗೆ ಈಗಾಗಲೇ ಆಟೋದಲ್ಲಿ ಮೈಕ್ ಮುಖಾಂತರ ಜಾಗೃತಿ ಮೂಡಿಸಲಾಗಿದೆ ಆದರು ಸಹ ಸಮಸ್ಯೆ ಬಗೆ ಹರಿದಿಲ್ಲವಾದ್ದರಿಂದ ಇದರ ಬಗ್ಗೆ ಸಂಬಂದಪಟ್ಟ ಇಲಾಖೆಯೊಂದಿಗೆ ಚರ್ಚಿಸಲಾಗುತ್ತದೆ ಎಂದು ತಿಳಿಸಿದರು.

14. ಮಾನ್ಯ ಅಧ್ಯಕ್ಷರು ಅಜೆಂಡಾದ ಪ್ರಕಾರ ಶ್ರೀಮತಿ ಕಾಂತಮ್ಮ (ಒಂಟಿ ಮನೆ ನಿರ್ಮಿಸಲು ಅರ್ಹ ಪಲಾನುಭವಿ) ರವರ ಕಡತದ ಬಗ್ಗೆ ಸಭೆಗೆ ತಿಳಿಸಿ ಎಂದು ವಾರ್ಡ್ ಅಭಿಯಂತರರಿಗೆ ಸೂಚಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಶ್ರೀಮತಿ ಕಾಂತಮ್ಮ ರವರು ದಿನಾಂಕ:31.03.2020 ರಂದು ಮರಣ ಹೊಂದಿರುತ್ತಾರೆ ಆದ್ದರಿಂದ ಶ್ರೀಮತಿ ಕಾಂತಮ್ಮ ರವರ ಪತಿಯಾದ ಶ್ರೀ ಕಣ್ಣನ್ ರವರು ಅಗತ್ಯವಾದ ದಾಖಲೆಗಳನ್ನು ಕಛೇರಿಗೆ ನೀಡಿ ನನ್ನ ಪತ್ನಿಯಾದ ಶ್ರೀಮತಿ ಕಾಂತಮ್ಮ ರವರ ಹೆಸರಿನಲ್ಲಿ ಮನೆ ನಿರ್ಮಿಸಲು ನೀಡಿರುವ ಅನುಮತಿ ಪತ್ರವನ್ನು ನನ್ನ ಹೆಸರಿನಲ್ಲಿ ನೀಡಿ ಎಂದು ಕೋರಿರುತ್ತಾರೆ ಆದರಂತೆ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.

15. ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆಡಳಿತಾಧಿಕಾರಿಯವರ ಅವಧಿ ಬಂದನಂತರ ಹೊಸದಾಗಿ ಯಾವುದೇ ಕಾಮಗಾರಿಗಳಿಗೆ ಅನುಮೋದನೆ ನೀಡಬಾರದೆಂದು ಆದೇಶ ನೀಡಿರುತ್ತಾರೆ. ಆದ್ದರಿಂದ 2020-21ನೇ ಅಯವ್ಯಯದಲ್ಲಿ ತುರ್ತು ಕಾಮಗಾರಿಗಳಿಗಾಗಿ ಕಾಯ್ದಿರಿಸಿರುವ ರೂ.31.00 ಲಕ್ಷಗಳ ಅನುದಾನವನ್ನು ತುರ್ತಾಗಿ ಅನುಮೋದನೆ ನೀಡಬೇಕೆಂದು ಸಭೆಯಲ್ಲಿ ಎಲ್ಲಾ ಸದಸ್ಯರು ತೀರ್ಮಾನಿಸಲಾಯಿತು.

16. ಶ್ರೀ ಡಾ|| ನಾಗೇಂದ್ರ ಸದಸ್ಯರು ರವರು ವಾರ್ಡ್‌ನಲ್ಲಿ ಜೋತು ಬಿದ್ದ ಕೇಬಲ್‌ಗಳನ್ನು ತಗಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ಹಿಂದಿನ ಸಭಯಲ್ಲಿ ಸೂಚಿಸಲಾಗಿತ್ತು ಆದರೆ ಈವರೆಗೆ ಯಾವುದೇ ರೀತಿಯ ಕೇಬಲ್‌ಗಳನ್ನು ತೆರವುಗೊಳಿಸಿರುವುದಿಲ್ಲ ಆದ್ದರಿಂದ ಬೆಸ್ಕಾಂ ಅಧಿಕಾರಿಗಳಿಗೆ ಕೂಡಲೇ ಕ್ರಮಕೈಗೊಳ್ಳಲು ತಿಳಿಸಲಾಯಿತು.

17. ಶ್ರೀ ನಂಜೇಗೌಡ ಬಿ.ವಿ ಸದಸ್ಯರು ರವರು ಕೃಷ್ಣಾ ಬೇಕರಿ ಹತ್ತಿರ ತಳ್ಳುವ ಗಾಡಿಗಳನ್ನು ತೆರವುಗೊಳಿಸುವಂತೆ ಸೂಚಿಸಲಾಯಿತು ಇದಕ್ಕೆ ಮಾನ್ಯ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

18. ಶ್ರೀ ರಾಜೇಶ್ ಸದಸ್ಯರು ರವರು ಬೀದಿ ದೀಪಗಳ ದುರಸ್ಥಿ ಮತ್ತಿ ಟೈಮರ್ ಅಳವಡಿಸದೇ ಇರುವುದರ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು ಇದಕ್ಕೆ ವಾರ್ಡ್ ಅಭಿಯಂತರರು ಸಂಬಂದಪಟ್ಟ್ ಅಧಿಕಾರಿಗಳಿಗೆ ತಿಳಸಲಾಗುವುದು ಎಂದು ಸಭೆಗೆ ತಿಳಿಸಿದರು.

19. ಶ್ರೀ ರಾಜೇಶ್ ರವರು ಆಟದ ಮೈದಾನಕ್ಕೆ ತಂತಿ ಬೇಲಿ ಮಾಡಿಸಿಕೊಡುವಂತೆ ಸಭೆಯಲ್ಲಿ ಕೋರಿದರು ಇದಕ್ಕೆ ವಾರ್ಡ್ ಅಭಿಯಂತರರು ಸದರಿ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

20. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು
K. Shivaprakasha
ವಾರ್ಡ್ ಕಮಿಟಿ,
ವಾರ್ಡ್.ಸಂಖ್ಯೆ.44 23/11/2020
ಮಾರಪ್ಪನಪಾಳ್ಯ

Scanned with CamScanner